**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕ:18.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ವಾದಿಗಳ ಪರ ಶ್ರೀ .ಎನ್.ಆರ್.ಸಿ. ವಕೀಲರಿಂದ:**

ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿರುವ ವಿಚಾರವನ್ನು 1 ನೇ ಪ್ರತಿವಾದಿ ಬರೆಸಿರುತ್ತಾರೆ. 2 ನೇ ಪ್ರತಿವಾದಿಯ ಹೆಂಡತಿ ನನ್ನ ತಾಯಿಯ ಅಕ್ಕನ ಮಗಳು. ಆದ್ದರಿಂದ ನಾನು ಅವರ ಪರವಾಗಿ ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳು ಅವರ ಕುಟುಂಬಕ್ಕೆ ಪಿತ್ರಾರ್ಜಿತ ಆಸ್ತಿಗಳು ಎಷ್ಟು ಮತ್ತು ಖರೀದಿಸಿದ ಆಸ್ತಿಗಳು ಎಷ್ಟು ಎಂದು ನನಗೆ ತಿಳಿಸಿರುವುದಿಲ್ಲ ಅವರು ಅವರ ಕುಟುಂಬಕ್ಕೆ ಸೇರಿದ ಆಸ್ತಿ 6 ಎಕರೆಗೆ 8 ಗುಂಟೆ ಕಮ್ಮಿಯಂತೆ ವಿಸ್ತೀರ್ಣ ಇರುತ್ತದೆ ಎಂದು ನನಗೆ ತಿಳಿಸಿರುತ್ತಾರೆ.ನಿ.ಡಿ.1 ಕ್ಕೆ ನಾನು ಸಾಕ್ಷಿಯಾ ಗಿ ಸಹಿ ಮಾಡಿರುವುದಿಲ್ಲ. ನಿ.ಡಿ.1 ಅನ್ನು ಬರೆಯುವ ಕಾಲಕ್ಕೆ ನಾನು ಹಾಜರಿದ್ದೆ. ನಿ.ಡಿ.1 ಎಷ್ಟು ಪುಟಗಳಿದ್ದು ಅದರ ಯಾವ ಪುಟಕ್ಕೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಡಿ.1 ರಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿಲ್ಲ ಎಂದರೆ ಸರಿ. ನಿ.ಡಿ.1 ರಂತೆ ಸ.ನಂ: 27 ರಲ್ಲಿ ವಾದಿಗೆ 1 ಎಕರೆ 37 ಗುಂಟೆ 2 ನೇ ಪ್ರತಿವಾದಿಗೆ 1 ಎಕರೆ 37 ಗುಂಟೆ ಮತ್ತು ಅವರ ತಂದೆ ತಾಯಿಯರಿಗೆ 1 ಎಕರೆ 38 ಗುಂಟೆ ವಿಭಾಗವಾಗಿದೆ ಎಂದು ಹೇಳಲಾದ ಜಮೀನುಗಳ ಪ್ರತ್ಯೇಕ ಚಕ್ಕುಬಂದಿಗಳು ನನಗೆ ಗೊತ್ತಿಲ್ಲ. ವಾದಿ ಮತ್ತು 2 ನೇ ಪ್ರತಿವಾದಿಗೆ ಇಬ್ಬರು ಅಕ್ಕತಂಗಿಯರಿರುತ್ತಾರೆ.

2. ದಾವಾಸ್ವತ್ತನ್ನು ವಾದಿ ಮತ್ತು ಪ್ರತಿವಾದಿಗಳು ಒಟ್ಟಾಗಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಿಡಿ.1 ರ ಮೇರೆಗೆ ಯಾವುದೇ ಕಂದಾಯ ದಾಖಲಾತಿಗಳು ಅಂಗೀಕಾರವಾಗಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ತಿಳಿಯದೇ ಇದ್ದರೂ 2 ನೇ ಪ್ರತಿವಾದಿಯ ಮಾತಿನ ಮೇರೆಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತು 1 ನೇ ಪ್ರತಿವಾದಿಯ ಹೆಸರಿನಲ್ಲಿದ್ದು ಅವರಿಗೆ ಯಾವ ಮುಖಾಂತರ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಿ.ಡಿ.1 ಅನ್ನು ಬರೆಯುವ ಕಾಲಕ್ಕೆ ನಾನು ಹಾಜರಿಲ್ಲದೇ ಇದ್ದರೂ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತು 1ನೇ ಪ್ರತಿವಾದಿಯ ತಂದೆಗೆ ಸೇರಿದ್ದು ಆದ್ದರಿಂದ ಅದು ವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿರುವ ವಿಚಾರವನ್ನು 2 ನೇ ಪ್ರತಿವಾದಿ ಬರೆಸಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀಸವಾಲು **4** ನೇ ಪ್ರತಿವಾದಿ ಪರ ವಕೀಲರಾದ ಶ್ರೀ**.**ಹೆಚ್**.**ಬಿ**.**ಜಿ**.**ರವರಿಂದ ಃ</u>

ಪ್ರಸ್ತುತ ದಾವೆಯನ್ನು ಯಾರು ಯಾರ ವಿರುದ್ಧ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಮತ್ತು ಅವರ ಹೆಂಡತಿಗೆ ವಾದಿ, 2 ರಿಂದ 4 ನೇ ಪ್ರತಿವಾದಿಗಳು ಮಕ್ಕಳಿರುತ್ತಾರೆ. ಅವರೆಲ್ಲರೂ ಒಟ್ಟು ಕುಟುಂಬದ ಸದಸ್ಯರೆಂದರೆ ಸರಿ. ಸದರಿ ಪಂಚಾಯಿತಿಯ ದಿನಾಂಕದಂದು ಹಾಜರಿದ್ದವರ ಹೆಸರುಗಳು ನನಗೆ ಗೊತ್ತಿಲ್ಲ. ದಾವಾಸ್ವತ್ತು ಸ.ನಂಃ 27 ರ ವಿಸ್ತೀರ್ಣ 5 ಎಕರೆ 36 ಗುಂಟೆ .ಸದರಿ ಜಮೀನು 1 ನೇ ಪ್ರತಿವಾದಿಯ ಒಟ್ಟು ಕುಟುಂಬದ ಜಮೀನು ಎಂದರೆ ಸರಿ. ದಾವಾಸ್ವತ್ತಿನಲ್ಲಿ ವಾದಿ ಮತ್ತು ಪ್ರತಿವಾದಿಗಳು ಜಂಟೀ ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿ ಸದರಿ ಜಮೀನು ನನ್ನ ಸಮಕ್ಷಮ ವಿಭಾಗವಾಗಿರುತ್ತದೆ ಎನ್ನುತ್ತಾರೆ. ನಿ.ಡಿ.1 ರ ಮುಖಾಂತರ 3 ಮತ್ತು 4 ನೇ ಪ್ರತಿವಾದಿಗಳಿಗೆ ಭಾಗಾಂಶ ನೀಡಿರುವುದಿಲ್ಲ. ನಿ.ಡಿ.1 ಕ್ಕೆ 3 ಮತ್ತು 4ನೇ ಪ್ರತಿವಾದಿಗಳು ಸಹಿ ಮಾಡಿರುವುದಿಲ್ಲ. ನಿ.ಡಿ.1 ರ ವಿಚಾರವನ್ನು3 ಮತ್ತು 4 ನೇ ಪ್ರತಿವಾದಿಗಳ ಗಮನಕ್ಕೆ ತಂದಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

2. 2 ನೇ ಪ್ರತಿವಾದಿ ನನ್ನ ಸಂಬಂದಿಕರು. ದಾವಾಸ್ವತ್ತನ್ನು ಲಪಟಾಯಿಸಲು 2 ನೇ ಪ್ರತಿವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**